# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 403
ಸದಸ್ಯರ ಹೆಸರು : ಶ್ರೀ ಅಡಗೂರ್ ಹೆಚ್. ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 16.02.2023.

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>2019 ರಿಂದ ಇಲ್ಲಿಯವರೆಗೂ ಸರ್ಕಾರದ ಕಾರ್ಯಕ್ರಮಗಳ ಜಾಹೀರಾತಿಗಾಗಿ ಮಾಧ್ಯಮಗಳಿಗೆ (TV + PRINT MEDIA + SOCIAL MEDIA) ಬಿಡುಗಡೆ ಮಾಡಿರುವ ಹಣವೆಷ್ಟು : ಬಿಡುಗಡೆ ಮಾಡಿದ್ದಲ್ಲಿ ವಿವರ ಒದಗಿಸುವುದು</td><td>ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಸಂಬಂಧಿಸಿದಂತೆ 2019 ರಿಂದ ಇಲ್ಲಿಯವರೆಗೂ ಸರ್ಕಾರದ ಕಾರ್ಯಕ್ರಮಗಳ ಜಾಹೀರಾತಿಗಾಗಿ ಮಾಧ್ಯಮಗಳಿಗೆ (TV + PRINT MEDIA + SOCIAL MEDIA) ಬಿಡುಗಡೆ ಮಾಡಿರುವ ಹಣದ ವಿವರ ಇಂತಿದೆ :
<table>
<tr><th>ಆರ್ಥಿಕ ವರ್ಷವಾರು</th><th>TV (ರೂ.ಕೋಟಿಗಳಲ್ಲಿ)</th><th>Print Media (ರೂ.ಕೋಟಿಗಳಲ್ಲಿ)</th><th>Social Media (ರೂ.ಲಕ್ಷಗಳಲ್ಲಿ)</th></tr>
<tr><td>2019-20</td><td>15.25</td><td>6.79</td><td>0.48</td></tr>
<tr><td>2020-21</td><td>17.45</td><td>9.75</td><td>0.48</td></tr>
<tr><td>2021-22</td><td>36.58</td><td>13.26</td><td>1.18</td></tr>
<tr><td>2022-23 31-01-2023 ರವರೆಗೆ</td><td>42.23</td><td>26.28</td><td>3.60</td></tr>
<tr><td>ಒಟ್ಟು</td><td>111.51</td><td>56.08</td><td>5.74</td></tr>
</table>
</td></tr>
<tr><td>(ಆ)</td><td>ಕರ್ನಾಟಕ ಮಾಧ್ಯಮ ಅಕಾಡೆಮಿಗೆ ಪೂರ್ಣ ಪ್ರಮಾಣದ ನೇಮಕಾತಿ ಮಾಡದೆ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿರುವುದು, ಹಣ ಖರ್ಚು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ : ಬಂದಿದ್ದಲ್ಲಿ ವಿವರ ಒದಗಿಸುವುದು :</td><td>ಕರ್ನಾಟಕ ಮಾಧ್ಯಮ ಅಕಾಡೆಮಿಯ ಬೈಲಾ ಪ್ರಕಾರ ಒಟ್ಟು ಸದಸ್ಯರ ಸಂಖ್ಯೆ 23. ಪ್ರಸ್ತುತ ಅಧ್ಯಕ್ಷರು, ಕಾರ್ಯದರ್ಶಿಗಳು ಸೇರಿ 15 ಮಂದಿ ಸದಸ್ಯರನ್ನು ನೇಮಿಸಿ ಆದೇಶಿಸಲಾಗಿದೆ.<br>ಕರ್ನಾಟಕ ಮಾಧ್ಯಮ ಅಕಾಡೆಮಿಯ ಬೈಲಾವನ್ನು ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 30 ಪಿಐಬಿ 81, ದಿನಾಂಕ : 25-01-1982ರ ಕ್ರಮ ಸಂಖ್ಯೆ 5.1.1(1) ರ ಪ್ರಕಾರ ಅಧ್ಯಕ್ಷರನ್ನೂ ಒಳಗೊಂಡಂತೆ ಏಳು ಸದಸ್ಯರು ನೇಮಕಗೊಂಡಿದ್ದರೆ ಪೂರ್ಣ ಕೋರಂ ಇದೆ ಎಂದು ಪರಿಗಣಿಸಿ ಮಂಡಳಿಯ ಕಾರ್ಯಕ್ರಮಗಳ ಆಡಳಿತಾತ್ಮಕ ಅನುಮೋದನೆಯನ್ನು ಪಡೆಯಲು ಅವಕಾಶವಿರುತ್ತದೆ.<br>2022-23ನೇ ಸಾಲಿಗೆ ಅಕಾಡೆಮಿಯು ಹಮ್ಮಿಕೊಳ್ಳಲು ಉದ್ದೇಶಿಸಿರುವ ವಿವಿಧ ಕಾರ್ಯಕ್ರಮಗಳ ಮತ್ತು ಅದಕ್ಕೆ ನಿಗದಿಪಡಿಸಿರುವ ಅನುದಾನಕ್ಕೆ ಸಂಬಂಧಿಸಿದ ಕ್ರಿಯಾ ಯೋಜನೆಯನ್ನು ಸರ್ಕಾರದ ಆದೇಶ ಸಂಖ್ಯೆ:ಕಸಂವಾ ಪಿಐಪಿ/130/2022, ದಿನಾಂಕ : 08-07-2022ರಲ್ಲಿ ಅನುಮೋದನೆ ನೀಡಿ, ತದನಂತರ ಆಯಾ ಮಾಹೆಯಲ್ಲಿ ಹಮ್ಮಿಕೊಂಡಿರುವ</td></tr>
</table>

| | | |
|---|---|---|
| | | ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. |
| (ಇ) | ALL INDIA NEWSPAPER EDITORS, CONFERENCE (AINEC) ಪ್ರಕಾರ ಕರ್ನಾಟಕ ಮಾಧ್ಯಮ ಅಕಾಡೆಮಿಗೆ ನಾಮನಿರ್ದೇಶನ ನಡೆದಿದೆಯೇ; ನಡೆದಿದ್ದಲ್ಲಿ, ವಿವರ ಒದಗಿಸುವುದು ? | ಕರ್ನಾಟಕ ಮಾಧ್ಯಮ ಅಕಾಡೆಮಿಯಲ್ಲಿ ALL INDIA NEWSPAPER EDITORS, CONFERENCE (AINEC) ಪತ್ರಿಕಾ ಸಂಘಟನೆಯ ಸದಸ್ಯರಿಗೆ ನೀಡಿದ್ದ ಪ್ರಾತಿನಿಧ್ಯದ ಬಗ್ಗೆ, ಅದೇ ಸಂಘಟನೆಯ ಸದಸ್ಯರಿಂದ ಅಕಾಡೆಮಿಗೆ ಒಮ್ಮೆ ಸದಸ್ಯರಾದವರನ್ನೇ ಪುನರಾವರ್ತಿತವಾಗಿ ಸದಸ್ಯರನ್ನಾಗಿ ನೇಮಕ ಮಾಡುತ್ತಿರುವುದಾಗಿ ಆಕ್ಷೇಪಿಸಿ ಹೊಸಬರಿಗೆ ಅವಕಾಶ ಮಾಡಿಕೊಡುವಂತೆ ಮನವಿಗಳು ಸ್ವೀಕೃತವಾಗಿದ್ದವು.<br>ಇದೇ ಸಂದರ್ಭದಲ್ಲಿ ಪ್ರತಿಷ್ಠಿತ ಪತ್ರಿಕೆಗಳ ಪ್ರತಿನಿಧಿಗಳು ಹಾಗೂ ಪ್ರಮುಖ ಸುದ್ದಿ ವಾಹಿನಿಗಳ ಬಾತ್ಮೀದಾರರೂ ಇರುವ ಬೆಂಗಳೂರು ವರದಿಗಾರರ ಕೂಟದ ಸದಸ್ಯರಿಗೂ ಪ್ರಾತಿನಿಧ್ಯ ಕಲ್ಪಿಸಬೇಕೆಂಬ ಮನವಿಯು ಸ್ವೀಕೃತವಾಗಿದ್ದ ಹಿನ್ನೆಲೆಯಲ್ಲಿ, ALL INDIA NEWSPAPER EDITORS, CONFERENCE (AINEC) ನ ಕರ್ನಾಟಕದ ಒಟ್ಟಾರೆ ಸದಸ್ಯರ ಸಂಖ್ಯಾಬಲ 46 ಇದ್ದು, ಬೆಂಗಳೂರು ವರದಿಗಾರರ ಕೂಟದ ಸದಸ್ಯರ ಸಂಖ್ಯಾಬಲ 200 ಕ್ಕೂ ಹೆಚ್ಚು ಇರುವುದನ್ನು ಗಮನಿಸಿ, ರಾಜ್ಯ ಸರ್ಕಾರವು ಕರ್ನಾಟಕ ಮಾಧ್ಯಮ ಅಕಾಡೆಮಿಯಲ್ಲಿನ ALL INDIA NEWSPAPER EDITORS, CONFERENCE (AINEC) ನ ಪ್ರಾತಿನಿಧ್ಯದ ಸಂಖ್ಯೆಯನ್ನು ಐದರಿಂದ ಎರಡಕ್ಕೆ ಕಡಿತಗೊಳಿಸಿ ಬೆಂಗಳೂರು ವರದಿಗಾರರ ಕೂಟದ ಮೂವರು ಸದಸ್ಯರಿಗೆ ಪ್ರಾತಿನಿಧ್ಯವನ್ನು ಕಲ್ಪಿಸಿ ಅಕಾಡೆಮಿಯ ಬೈಲಾಗೆ ಸರ್ಕಾರದ ಆದೇಶ ಸಂ:ಕಸಿಇ-ವಿಪಿಪಿ/21/2021, ದಿ.05/10/2021ರಲ್ಲಿ ತಿದ್ದುಪಡಿ ತರಲಾಗಿದೆ.<br>ಕರ್ನಾಟಕ ಮಾಧ್ಯಮ ಅಕಾಡೆಮಿಯಲ್ಲಿ ಪ್ರಾತಿನಿಧ್ಯ ಕಲ್ಪಿಸಲು ನಾಮ ನಿರ್ದೇಶನಕ್ಕೆ ಹೆಸರುಗಳನ್ನು ಕಳುಹಿಸುವಂತೆ ALL INDIA NEWSPAPER EDITORS, CONFERENCE (AINEC)ಗೆ ಪತ್ರ ಬರೆಯಲಾಗಿದ್ದು, ಸದರಿ ಸಂಘಟನೆ ವತಿಯಿಂದ ಪ್ರತಿಕ್ರಿಯಿಸಿದಲ್ಲಿ ನಿಯಮಾನುಸಾರ ಮುಂದಿನ ಕ್ರಮ ವಹಿಸಲಾಗುವುದು. |

ಸಂಖ್ಯೆ: ಕಸಿಇ-ಪಿಐಪಿ/36/2023

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ